ಈಗ ಬಾಡಿಗೆಗಿರುವ ಮನೆ ಸಣ್ಣ ಸಂಸಾರಕ್ಕೆ ಸಾಕು—ಒಂದು ಹಾಲು, ರೂಮು ಅಡುಗೆಮನೆ ಆಚೆಗೆ ಸ್ನಾನದ ಕೋಣೆ, ಟಾಯ್ಲೆಟ್. ಈಗಿನವರಿಗೆ ಹಿಡಿಸುವುದೋ ಇಲ್ಲವೋ. ಮನೆಯೊಳಗೇ ಎಲ್ಲವೂ ಇರಬೇಕೆಂದು ಬಯಸುವ ಕಾಲ. ರೆವಿನ್ಯೂ ನಿವೇಶನದಲ್ಲಿ ಕಟ್ಟಡವಿದ್ದರೆ, ಮುಂದೆ ಸೈಟಿಗೆ ಭದ್ರತೆ ಎಂದು ಆ ದಿನಗಳಲ್ಲಿ ಸಣ್ಣದಾಗಿ ಕಟ್ಟಿಸಿದ್ದೆ. ಅನಂತರದ ದಿನಗಳಲ್ಲಿ ನಮಗೆ ವಾಸಕ್ಕೆ ಬೇಕೆನ್ನಿಸಿದಾಗ ದೊಡ್ಡ ಮನೆ ಕಟ್ಟಿಸಿದ್ದು. ಹಳೆಯ ಮನೆ ಬಾಡಿಗೆಗೆ ಕೊಟ್ಟಿದ್ದೆ. ಖಾಲಿಯಾದಾಗಿನಿಂದ ನಾಲ್ಕಾರು ಮಂದಿ ನೋಡಿಕೊಂಡು ಹೋಗಿದ್ದರು, ಯಾಕೋ ಸರಿಹೋಗಿರಲಿಲ್ಲ. ಈಗ ಬರುವವರು ಹೇಗೋ? ಅವರಿಗೆ ಹಿಡಿಸುವುದೋ ಇಲ್ಲವೋ? ನೆಲ ಋಣವಿದ್ದರೆ ಆದೀತು ಎಂದು ಸುಮ್ಮನಾದೆ.

★★★

ಕರೆಗಂಟೆ ಶಬ್ದಿಸಿದಾಗ ಲಗುಬಗೆಯಿಂದ ಬಾಗಿಲು ತೆಗೆದೆ. ನಕುಲ, 'ಆಂಟಿ ಗೇಟ್ ಹತ್ರ ನಿಂತಿದ್ದಾರೆ ಬರೋಕ್ಕೆ ಸಂಕೋಚ' ಎಂದು ನಕ್ಕಾಗ, 'ಅಯ್ಯೋ, ಅದಕ್ಕೇನಂತೆ ಬರೋಕ್ಕೆ ಹೇಳು' ಎನ್ನುತ್ತಲೇ, 'ಬನ್ನಿ ಪರವಾಗಿಲ್ಲ' ನಾನೇ ಕರೆಯಲು ಮುಂದಾದೆ. ಸುಭದ್ರಾ! ತಲೆತಿರುಗಿದಂತಾಯ್ತು. ಸಾವರಿಸಿಕೊಂಡು, 'ಬನ್ನಿ ಒಳಗೆ' ಎಂದೆ. ನನ್ನನ್ನು ಕಂಡು ಅವಳಿಗೂ ಮೆದುವಾದ ಕಂಪನವಾದಂತಿತ್ತು. ಕಷ್ಟಪಡುತ್ತಲೇ ಮನೆಯೊಳಕ್ಕೆ ಬಂದಳು. 'ಅಂಕಲ್ ನಾನೇ ಮನೆ ತೋರಿಸ್ಲಾ?' ನಕುಲ ಉತ್ಸಾಹ ತೋರಿದಾಗ ಆ ಕ್ಷಣಕ್ಕೆ ಅದೇ ಸರಿಯೆನ್ನಿಸಿ ಮನೆಬಾಗಿಲ ಕೀಲಿ ಕೊಟ್ಟೆ. ಬಹುಶಃ ಅವಳಿಗೂ ಶಾಕ್ ಆಗಿರಬಹುದು; ನನ್ನ ಮನೆಯೇ ಬಾಡಿಗೆಗಿದೆ ಎಂದು ನಿರೀಕ್ಷಿಸಿರುವ ಸಾಧ್ಯತೆ ಖಂಡಿತ ಇರದು.

ಹತ್ತು ನಿಮಿಷದೊಳಗೆ ಮನೆ ನೋಡಿಕೊಂಡು ಬಂದಿದ್ದರು. ನಕುಲನ ಎದುರು ಬೇರೇನೂ ಮಾತನಾಡುವುದು ಬೇಡ ಎನ್ನಿಸಿತ್ತೇನೋ – ಸುಭದ್ರಾ ಮನೆ ಬಗ್ಗೆ ತುಟಿ ಬಿಚ್ಚಲಿಲ್ಲ. ನಾನೂ ಏನೂ

